# ಕೆಲಸದ ಜಾಗದಲ್ಲಿನ ಕಾಮಣ್ಣರು



**ಉದ್ಯೋಗದ ಸ್ಥಳಗಳಲ್ಲಿ ಹೆಣ್ಣು ಅನುಭವಿಸುವ ಕಿರುಕುಳಗಳಿಗೆ ನಾನಾ ಮುಖಗಳಿವೆ. ಅವುಗಳಲ್ಲಿ ಬಹುತೇಕ ಮುಖಗಳು, ಹೊರಜಗತ್ತಿಗೆ ಗೋಚರವಾಗುವುದೇ ಇಲ್ಲ. ಹೆಣ್ಣಿನ ತಾಳ್ಮೆಯನ್ನು 'ಟೇಕನ್ ಫಾರ್ ಗ್ರಾಂಟೆಡ್' ಎಂದು ಭಾವಿಸುವ 'ದೊಡ್ಡ ಕುರ್ಚಿ'ಯ ಕಾಮಣ್ಣರನ್ನು ಎದುರಿಸಲೂ ಆಗದೆ, ಸಹಿಸಿಕೊಳ್ಳಲೂ ಆಗದೆ ಅನುದಿನ ಕಚೇರಿಯಲ್ಲಿ ನರಕವನ್ನನುಭವಿಸುತ್ತಿರುವ ಎಷ್ಟೋ ಮಹಿಳೆಯರು ಇದ್ದಾರೆ.**

■ **ಸೌಮ್ಯಲಕ್ಷ್ಮೀ ಕುಕ್ಕಜೆ,**
**ನ್ಯಾಯವಾದಿ**

ಒಂದು ಕಚೇರಿ. ಅಲ್ಲಿಯ ಒಬ್ಬ ಸೀನಿಯರ್ ಉದ್ಯೋಗಿ ಪ್ರತಿದಿನ ಬೆಳಿಗ್ಗೆ ಬರುತ್ತಿದ್ದಂತೆಯೇ ತನ್ನ ಟೀಮ್‌ನ ಪ್ರತಿಯೊಬ್ಬ ಮಹಿಳೆಯನ್ನು 'ಗುಡ್‌ಮಾರ್ನಿಂಗ್‌ಸ್ವೀಟಿ', 'ಹಲೋ ಡಾರ್ಲಿಂಗ್' ಎಂದೇ ಮಾತನಾಡಿಸುವುದು. ಏನೇ ಮಾತನಾಡಿಸಬೇಕಾದರೂ, 'ಡಿಯರ್', 'ಡಾರ್ಲಿಂಗ್', 'ಸ್ವೀಟ್‌ಹಾರ್ಟ್' – ಇಂತಹ ಪದಗಳನ್ನೇ ಬಳಸುವುದು. ಕೆಲವರಿಗೆ ಏನೂ ಅನಿಸದಿರಬಹುದು ಅಥವಾ 'ಈತ ಇರುವುದೇ ಹೀಗೆ ಅಂತ ಸುಮ್ಮನಿರಬಹುದು. ಇನ್ನು ಕೆಲವು ಮಹಿಳೆಯರು, ಕಿರಿಕಿರಿ ಎನಿಸಿದರೂ ಇದನ್ನು ಕಡೆಗಣಿಸಿ ಕೆಲಸ ಮಾಡುತ್ತಾರೆ. ಏಕೆಂದರೆ ಅವರಿಗೆ ಅವರ ಉದ್ಯೋಗ ಬಹಳ ಮುಖ್ಯವಾಗಿರುತ್ತದೆ; ಅಲ್ಲಿ ಯಾವ ತಿಕ್ಕಾಟವಿಲ್ಲದೇ ಕೆಲಸ ನಡೆದರೆ ಸಾಕಾಗಿರುತ್ತದೆ.

ಮನೋಹರ್ ಅನಿತಾಳ ಬಾಸ್. ಆತ ಇತ್ತೀಚೆಗೆ ಅನಿತಾಗೆ ರಾತ್ರಿ ಹತ್ತು ಗಂಟೆಯ ನಂತರ ಮೆಸೇಜು ಕಳುಹಿಸಲು ಪ್ರಾರಂಭಿಸಿದ್ದಾನೆ. 'ಚೆನ್ನಾಗಿ ಊಟ ಮಾಡಿದೆಯಾ', 'ಒಳ್ಳೆ ನಿದ್ದೆ ಮಾಡು' ಇತ್ಯಾದಿ. ಅನಿತಾ, 'ಓಕೆ ಸರ್', 'ಎಸ್ ಸರ್', ಇಷ್ಟೇ ಉತ್ತರಿಸುತ್ತಾಳೆ. ಅನಿತಾ ಒಮ್ಮೆ ಉತ್ತರಿಸದಿದ್ದಾಗ, ಮರುದಿನ ಅವಳನ್ನು ಕ್ಯಾಬಿನ್‌ಗೆ ಕರೆದು, ಮನೋಹರ್ ಗದರುತ್ತಾನೆ. ನಂತರ, 'ನಾನು ಹೇಳಿದಂತೆ ಸ್ವಲ್ಪ ಹೆಚ್ಚುವರಿ ಕೆಲಸ ಮಾಡಿದರೆ ನೀನು ಕಂಪನಿಯಲ್ಲಿ ತುಂಬ ಬೆಳೆಯಬಹುದು' ಎನ್ನುತ್ತಾನೆ. ಮತ್ತೆ ಒಂದು ವಾರದಲ್ಲಿ, 'ನಾನು ಮುಂದಿನ ವಾರ ಮುಂಬೈಗೆ ಹೋಗಬೇಕು, ನೀನೂ ಬಾ. ಒಂದು ರಾತ್ರಿ ಇದ್ದು ಮರುದಿನ ಹಿಂತಿರುಗುವುದು. ನನಗೆ ಒಂದು ಮುಖ್ಯ ಮೀಟಿಂಗ್ ಇದೆ' ಎಂದು ಹೇಳುತ್ತಾನೆ. ಆಗ ಅನಿತಾ, 'ನನಗೆ ಏನು ಕೆಲಸ ಸರ್' ಕೇಳುತ್ತಾಳೆ. 'ಹಾಗೇನೂ ಕೆಲಸ ಇಲ್ಲ, ಒಟ್ಟಿಗೇ ಹೋಗಬಹುದು ಒಂದೇ ಹೋಟೆಲಿನಲ್ಲಿ ರೂಮ್ ಬುಕ್ ಮಾಡಿಸ್ತೀನಿ' ಅಂತ ಹೇಳುತ್ತಾನೆ. ಅನಿತಾ ಸ್ವಲ್ಪ ತಡೆದು, 'ನನ್ನ ಗಂಡನನ್ನೂ ಕರೀತೀನಿ ಸರ್. ಅವನು ನಮ್ಮ ಸ್ವಂತ ಖರ್ಚಿನಲ್ಲೇ ಬರ್ತಾನೆ' ಎಂದು ಹೇಳುತ್ತಾಳೆ. ಆಗ ತಕ್ಷಣ ಮನೋಹರ್, 'ಇರಲಿ ಬಿಡು, ಇನ್ನೊಮ್ಮೆ ನೋಡೋಣ' ಅಂತ ಹೇಳ್ತಾನೆ. ಮನೋಹರ್ ಈಗೀಗ ಅನಿತಾಗೆ ಏನೂ ಕೆಲಸ ಹೇಳುತ್ತಿಲ್ಲ. ಮಾತ್ರವಲ್ಲದೆ ಆಕೆಗೆ ಅಹಿತಕರ ಉದ್ಯೋಗದ ವಾತಾವರಣವನ್ನು ಸೃಷ್ಟಿಸಿಬಿಟ್ಟಿದ್ದಾನೆ.

***

ಉದ್ಯೋಗದ ಸ್ಥಳಗಳಲ್ಲಿ ಇಂತಹ ಹೇಳಿಕೊಳ್ಳಲು ಆಗದಂತಹ, ಸೂಚ್ಯ ನಡತೆಯ ಕಿರುಕುಳಗಳಲ್ಲದೇ, ನೇರವಾದ, ಅಸಭ್ಯ ವರ್ತನೆಯಿಂದ ಕೂಡಿದ ಕಿರುಕುಳಗಳೂ ಮಹಿಳೆಯರ ಮೇಲೆ ನಡೆಯುತ್ತವೆ. ಅಸಭ್ಯ ಪದಗಳನ್ನು ಬಳಸಿ ಮಾತಾಡಿಸುವುದು, ಅಶ್ಲೀಲ ಜೋಕ್, ವಿಡಿಯೊ ಕಳಿಸುವುದು, ಹಿಂಬಾಲಿಸುವುದು, ಬಿಡದೇ ಮುಜುಗರವಾಗುವಂತೆ ನೋಡುವುದು, ಭಾವನಾತ್ಮಕವಾಗಿ ಮಾತನಾಡಿ ತಮಗೆ ಪ್ರತಿಸ್ಪಂದಿಸುವಂತೆ ಒತ್ತಾಯಿಸುವುದು, ಲೈಂಗಿಕ ಸಂಬಂಧಕ್ಕೆ ಒತ್ತಾಯಿಸುವುದು, ಮುಟ್ಟುವುದು – ಇವೆಲ್ಲವೂ ಉದ್ಯೋಗದ ಸ್ಥಳಗಳಲ್ಲಿ ನಡೆಯುತ್ತವೆ. ಇದರ ಬಗ್ಗೆ ದೂರು ನೀಡುವುದು ದೂರದ ಮಾತು, ಹತ್ತಿರದವರ ಬಳಿ ಹೇಳಿಕೊಳ್ಳುವುದೂ